(SRI J. B. MALL RADHYA)

resources and in spite of the best efforts they have made, they cannot try to implement the Third Five-Year Plan. Their cash position, their financial position does not admit of any kind of implementation of the Third Five-Year Plan. It is against this context that the Finance Commission that will come, will have to take note of the circumstances and come to the rescue of the State Government. If the ad-hoc grant of six crores was fixed by the Second Finance Commission, I am sure that a case will be made out for a much greater amount than the six crores of rupees now for the ambitious Third Plan, involving 75 or 300 crores, has to be carried out. Having regard to the integration of the States, if you have got to do justice by the integrated areas, if you have got to give adequate attention to the undeveloped areas, as I said, you need not resort to taxation measures for financing the Third Plan. The development of your various schemes and the economy in expenditure which is likely to be of the order of a crore and odd, the working of your industrial concerns in a manner that would bring profit—the Minister for Transport wants to treat his concern as a commercial concern—would bring in more money. Suppose the concession charcoal is withdrawn, the and suppose of the concession about fuel is withdrawn. you are giving electricity at a ridiculously low rate. Is there any industry in Mysore which is getting power at this rate? With all these concessions, what is the amount you are getting? Even with the retention price of the Government of India it is not making a profit. You must therefore immediately appoint a High Power Commission for going into the working of the industrial concerns to make them work on a satisfactory basis. We on this side of the House, know that every one in the State has got a contribution to make. You talk of the Plan being a people's Plan. But I am afraid it is only on paper. When I spoke on the Governor's Speech, I have already stated how you have not consulted the State Industries Development Council at least in regard to the industries to be included in the Plan. This is the type of liaison which you wish to develop between the State Development Council or the kind of liaison between the Legislature and the several important industrial companies set up. With what courage did the Government print and place in the hands of the members the industries to be included in the Plan when it has not gone through the Industrial Council which you yourself set up? You ask for co-operation. You ask for sacrifice. You want to consider this as a people's Plan. I wish to ask you whether any portion of the Draft Plan in the hands of the members of the Legislature has gone through the process of discussion at the level of the district, at the level of the tahsil or the hobli or of the village. I doubt, having toured through the rural parts, whether here is any Plan consciousness in the people, except in the minds of the people who are paid. This is a matter in which every one should work irrespective of party affiliations. After all, if the Third Plan has got to be made an unqualified success, it should be with the combined endeavour of all these people, whether they be in the Opposition or Treasury Benches or the public outside. Until the people become conscious of the Plan, the type of co-operation you expect cannot come in an abundant measure. I wish that as a result of the discussion we will have of the Budget, there will be more suggestions in regard to the improvement of the resources of the State so as to make our cash-position worthwhile in the middle of the Third Plan.

I am grateful to the Hon'ble Speaker for allowing me quite a lot of time.

Half-an-hour discussion on Question No. 143. re: unauthorised cultivation of coffee and cardamom in Sakleshpur Taluk.

ಶ್ರೀ ಬಿ. ಎನ್. ಬೋರಣ್ಣಗೌಡ (ಬೇಲೂರು).—ಸ್ವಾಮಿ, ನಾನು ಈ ಪ್ರಶ್ನೆ ಹಾಕಿ ಕೆಲವು ವಿಷಯ

ಗಳನ್ನು ತಿಳಿಸಬೇಕೆಂದು ಸರ್ಕಾರದವರನ್ನು ಕೇಳಿದ್ದೆ. ಮೇರೆ ಹನ್ನೊಂದು ತಿಂಗಳಲ್ಲಿ 240 ಕೇಸುಗಳು ಗಮನಕ್ಕೆ ಬಂದಿವೆ, ಅದರಲ್ಲಿ 174 ಸಂದರ್ಭದಲ್ಲಿ ತಕರಾರುತಃಖ್ತೆ ಜುಲ್ಮಾನೆ ವಸೂಲು ಮಾಡಲಾಗಿದೆ, ಎಂಟು ಸಂದರ್ಭಗಳಲ್ಲಿ ಎವಿಕ್ಷನ್ ಆರ್ಡರನ್ನು ಪಾಸ್ ಮಾಡಲಾಗಿದೆ ಮತ್ತು ಏಳು ಸಂದರ್ಭಗಳಲ್ಲಿ ಅನಧಿಕೃತವಾಗಿ ಕಾಫಿ ಮತ್ತು ಏಲಕ್ಕಿ ವ್ಯವಸಾಯ ಮಾಡಿದ ಜಮೀನುಗಳನ್ನು ಖಾತಂ ಮಾಡಿಕೊಟ್ಟು ಸಂಬಂಧ ಪಟ್ಟವರಿಂದ ಇಷ್ಟು ಮೊಬಲಗನ್ನು ವಸೂಲು ಮಾಡಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಕಾಫಿ ಮತ್ತು ಏಲಕ್ಕಿ ಬೆಳೆಯುವ ಪ್ರದೇಶಗಳಲ್ಲಿ ತೋಟಗಳಿಗೆ ಹೋಗುವ ರಸ್ತೆಯಲ್ಲಿ ಕಾಫಿ ಬೆಳೆದಿದ್ದಾರೆ; ಅದನ್ನು ಕೇಳುವವರೇ ಇಲ್ಲ. ಗೋಮಾಳದಲ್ಲಿ, ಕೆರೆ ಅಂಗಳದಲ್ಲಿ ಬೆಳೆದಿದ್ದಾರೆ. ಹೀಗೆ ಅನಧಿಕೃತವಾಗಿ ಕಾಫಿ ಮತ್ತು ಏಲಕ್ಕಿ ಬೆಳೆಯುವ ಪ್ರದೇಶ ವರ್ಷೇ ವರ್ಷೇ ಬಹಳವಾಗಿ ಹೆಚ್ಚಿದೆ. ಸಾಧಾರಣವಾಗಿ ಕಾಫಿ, ಏಲಕ್ಕಿ ಬೆಳೆಯುವವರು ಸ್ವಲ್ಪ ಶ್ರೀಮಂತರು ಏಲಕ್ಕಿ ಬೆಳೆಯಾಗಬೇಕಾದರೆ ಮೂರು ವರ್ಷ ಕಾಯಬೇಕು, ಕಾಫಿ ಬೆಳೆಗೆ ನಾಲ್ಕು ವರ್ಷ ಕಾಯಬೇಕು. ಪ್ರತಿವರ್ಷ ಸರ್ಕಾರಿ ಜಮೀನಿಗೆ ಕಂದಾಯ ಕೊಡದೆ ಕಾಫಿ ಏಲಕ್ಕಿ ಬೆಳೆಯುವ ಪ್ರದೇಶ ಸಾವಿರಾರು ಎಕರೆಯಷ್ಟಿದೆ. ಇದರಲ್ಲಿ ಇನ್ನೊಂದು ವಿಷಯ ಪರೀತ್ಯವಿದೆ. ತಗ್ಗಿನ ಪ್ರದೇಶವಿರುವ ಕಡೆ ಸರ್ವೇ ಮಾಡುವಾಗ, ತಂತಿ ಉಪಯೋಗಿಸಿ ಅಳತೆ ಮಾಡುವಾಗ ಹೆಚ್ಚು ಪ್ರದೇಶವನ್ನು ಆಕ್ರಮಿಸಿಕೊಂಡಿದ್ದಾರೆ. ಹೀಗೆ ಹೇಳದೆ ಕೇಳದೆ ಹೆಚ್ಚು ಭೂಮಿ ಆಕ್ರಮಿಸಿಕೊಂಡು ಬೇಕಾದಷ್ಟು ಬೆಳೆದುಕೊಂಡಿದ್ದಾರೆ. ಈಗ ಹನ್ನೊಂದು ತಿಂಗಳ ವಿಷಯ ಮಾತ್ರ ಗೊತ್ತಾಗಿದೆ. ಈಗ ಸುಮಾರು ಹತ್ತು ವರ್ಷಗಳಿಂದ 20 ವರ್ಷಗಳವರೆಗೆ ವಯಸ್ಸಾಗಿರುವ ಗಿಡಗಳಿವೆಯೆಂದ ಮೇಲೆ ಆಪ್ರದೇಶದಲ್ಲಿ ಸರ್ಕಾರಕ್ಕೆ ಗೊತ್ತಿಲ್ಲದೆ ಎಷ್ಟು ದಿವಸಗಳಿಂದ ಸರ್ಕಾರಿ ಜಮೀನನ್ನು ಅನಧಿಕೃತವಾಗಿ ಆಕ್ರಮಿಸಿಕೊಂಡಿದ್ದಾರೆಂಬುದನ್ನು ಊಹಿಸಬಹುದು. ಆದರೆ ಅಂಥ ಅನೇಕರನ್ನು ಆಪ್ರದೇಶದಿಂದ ಇನ್ನೂ ಹೊರಕ್ಕೆ ಹಾಕಿಲ್ಲ: ಬೆಳೆಯುವವರು ಬೆಳೆಯುತ್ತಲೇ ಇದ್ದಾರೆ. ಇದರಿಂದ ಸರ್ಕಾರಕ್ಕೆ ಬರುವ ಆದಾಯ ಹೋಯಿತು. ಸುಮಾರು 12ವರ್ಷಗಳಿಂದ ಕಾಫಿ ಬೆಳೆಯಿಂದ ಹೆಚ್ಚು ಆದಾಯ ಬರುತ್ತಿರುವುದು ಗೊತ್ತಿದೆ, ಹೀಗೆ ಅನಧಿಕೃತವಾಗಿ ಪ್ರದೇಶವನ್ನು ಆಕ್ರಮಿಸಿಕೊಂಡು ಬೆಳೆಯಿಡುವಾಗ ಶ್ಯಾನುಭೋಗರು ತಕರಾರು ತಃಖ್ತೆ ಎಲ್ಲ ಸಂದರ್ಭಗಳಲ್ಲೂ ಹಾಕುವುದಿಲ್ಲ. ಶ್ಯಾನುಭೋಗರಿಗೆ ಸಂಭಾವನೆ ಕೊಡದಿದ್ದಾಗ ಆಥವಾ ನರ್ಮದೀಯರು ಬಂದು ಅಳತೆ ಮಾಡಿ ಹೆಚ್ಚು ಜಮೀನನ್ನು ಸಾಗುವಳಿ ಮಾಡಿದ್ದಾರೆಂದು ಬರೆದಾಗ ಟಿ.ಟಿ. ಹಾಕುತ್ತಾರೆಯೇ ಹೊರತು ಸಾಧಾರಣ ಸನ್ನಿವೇಶಗಳಲ್ಲಿ ಹಾಕುವುದಿಲ್ಲ. ಹೀಗೆ ಹತ್ತರಿಂದ 30 ಎಕರೆಗಳ ವರೆಗೆ ಕೆಲವರು ಆಕ್ರಮಿಸಿಕೊಂಡಿದ್ದಾರೆ. ಒಂದು ಸಂದರ್ಭದಲ್ಲಿ ಎರಡು ಸಾವಿರ ಎಕರೆ ಪ್ರದೇಶದಲ್ಲಿ ಎಂಟು ಹತ್ತು ವರ್ಷಗಳವರೆಗೆ ಗೊತಾಗದಂತೆ ಬೆಳೆದಿದ್ದರು. ಆಗ ಸಬ್‌ಡಿವಿಜಿ ಆಫೀಸರು ಸರ್ವೇ ಮಾಡಿ ನಾಮಿನಲ್ಲಾಗಿ ಕೊಂಚ ಹಣ ಪಡೆದು ಸಾವಿರಾರು ಎಕರೆಯನ್ನು ಕೊಟ್ಟರು. ಹಾಗಿರುವಾಗ ಏಲಕ್ಕಿ ಮತ್ತು ಕಾಫಿ ಬೆಳೆಯುವ ಪ್ರದೇಶದಲ್ಲಿ ಜಾಗ್ರತೆ ಸರ್ವೇ ಮಾಡಿಸಬೇಕಾದ್ದು ಅಗತ್ಯವಾಗಿದೆ. ಎಷ್ಟು ವರ್ಷ ಹೆಚ್ಚು ಜಮೀನು ಒತ್ತುವರಿ ಮಾಡಿಕೊಂಡು ಬೆಳೆ ತೆಗೆದು ಕೊಂಡಿದ್ದಾರೆಂದು ನೋಡಿ; ಆ ಬೆಳೆಗನುಗುಣವಾಗಿ ನಂಬಂಧಪಟ್ಟವರಿಂದ ಸರ್ಕಾರಕ್ಕೆ ಬರಬೇಕಾದ ಮೊಬಲಗನ್ನು ಪಡೆಯಬೇಕು. ಜಮೀನಿಲ್ಲದಿರುವವರಿಗೆ ಜಮೀನು ಕೊಡಬೇಕೆಂದು ಒಂದು ತೀರ್ಮಾನ ಕೈಕೊಂಡ ಮೇರೆ ಕಾಫಿಯ ವಿಚಾರದಲ್ಲಿ ಹಾಗೆ ಮಾಡುವುದಕ್ಕೆ ಬರುವುದಿಲ್ಲವೆಂದು ಮಾನ್ಯ ರೆವೆನ್ಯೂ ಮಂತ್ರಿಗಳು ಹೇಳಿದರು. ಆದರೆ ಅನಧಿಕೃತವಾಗಿ ವ್ಯವಸಾಯ ಮಾಡಿರುವ ಸಂದರ್ಭವಿದೆ. ಕಾಫಿ ಬೆಳೆಯುವವರು ಶ್ರೀಮಂತರು, ಹಾಗಿರುವಾಗ ಶ್ರೀಮಂತರು ಇನ್ನೂ ಶ್ರೀಮಂತರಾಗಲು ಇನ್ನೂ ಹೆಚ್ಚು ಜಮೀನನ್ನು, ಆದರಲ್ಲೂ ಸರ್ಕಾರಿ ಜಮೀನನ್ನು ಅನಧಿಕೃತವಾಗಿ ಆಕ್ರಮಿಸಿಕೊಂಡಿರುವುದನ್ನು ಅವರಿಗೇ ಕೊಡುವುದು ಯಾವ ನೀತಿ?

ಈಗ ಅಥಾರಿಟಿಯಿಲ್ಲದೆ, ಸರ್ಕಾರದ ಮನ್ನಣೆಯಿಲ್ಲದೆ ವಿರುದ್ಧವಾಗಿ ಹೆಚ್ಚು ಬೆಳೆ ಬೆಳೆದುಕೊಂಡಿರುವುದಕ್ಕೆ ನಾಮಿನಲ್ ಅಸ್ಸೆಸ್ಟ್ ಪ್ರೈಸ್ ಹಾಕಿ 2213 ರೂಪಾಯಿ 54 ನಯಾಪೈಸೆ ವಸೂಲ್ಮಾಡಿದೆಯೆಂದು ಹೇಳಿದ್ದಾರೆ. ಎಷ್ಟು ಎಕರೆಗೆ ಅಷ್ಟನ್ನು ವಸೂಲು ಮಾಡಿದೆಯೆಂಬುದನ್ನು ಕೊಟ್ಟಿಲ್ಲ. ಆದುದರಿಂದ ಸರ್ಕಾರಕ್ಕೆ ಬರುವ ಹಣ ಯಾವ ರೀತಿ ಪೋಲಾಗಿ ತ್ತಿದೆಯೆಂಬುದನ್ನು ಯೋಚನೆಮಾಡಿ, ಕಾಫಿ ಬೆಳೆಯುವ ಕಡೆ 1,500ರಿಂದ 2,800ರೂಪಾಯಿಗಳವರೆಗೆ ಒಂದು ಎಕರೆಗೆ ಬೆಲೆಯಾಗುತ್ತದೆ. ಈ ದಿವಸ 12 ಆಣೆ ಕಂದಾಯ ಕೊಡುವ ಕಡೆ ತೆಂಗು, ತೆಂಗು ಬೆಳೆಯುವ ಬಾಗಾಯ್ತು ಜಮೀನಿನಲ್ಲಿ ಎರಡು-ಮೂರು ರೂಪಾಯಿ ಕಂದಾಯ ಕೊಡುವ ಕಡೆ ಅಡಿಕೆ, ಐದು-ಆರು ರೂಪಾಯಿ ಕಂದಾಯ ಕೊಡುವ ತರಿಯಲ್ಲಿ ತರಿ ಬೇರೆ ಬೆಳೆಯುತ್ತಿದ್ದಾರೆ. 20 ಸಾವಿರ ಎಕರೆಗಳಷ್ಟಿರುವ ಅಮೃತಮಹಲ್ ಕಾವಲನಲ್ಲಿ ಈಗ ಐದು ಸಾವಿರ ಎಕರೆಗಳಲ್ಲಿ ಅನಧಿಕೃತವಾಗಿ ವ್ಯವಸಾಯ ನಡೆಯುತ್ತಿದೆ. ಸರ್ಕಾರದ ಖೊಕ್ಕನಕ್ಕೆ ಬರಬೇಕಾದ ಹಣ ಹೀಗೆ ಪೋಲಾದರೆ ಸರ್ಕಾರ ನಡೆಸುವುದು ಹೇಗೆ? ಹೀಗೆ ಪೊಲಾಗುವುದನ್ನು ತಡೆಗಟ್ಟಬೇಕು, ಕೊಡಗು ಮತ್ತು ಮದರಾಸು ಪ್ರಾಂತಗಳಲ್ಲಿ ಸರ್ಕಾರದ ಅನುಮತಿಯಿಲ್ಲದೆ ಜಮೀನಿನಲ್ಲಿ ಸಾಗುವಳಿಮಾಡುವವರಿಗೆ ಸಾಧಾರಣವಾಗಿ ಎಷ್ಟು ಕಂದಾಯ ಹಾಕಬಹುದೋ ಅದರ 75ರಷ್ಟು, ಹೆಚ್ಚು ಆದಾಯ ಬರುವ ಜಮೀನುಗಳಾದರೆ ಅದರ 150ರಷ್ಟು ದಂಡ ಹಾಕಿ ಅಲ್ಲಿ ವಸೂಲು ಮಾಡುತ್ತಾರೆ. ಅದೇ ನಮ್ಮಲ್ಲಿ ಯಾವ ರೀತಿಯೂ ಇಲ್ಲ. ಹತ್ತು ಎಕರೆ ವ್ಯವಸಾಯ ಮಾಡುತ್ತಿದ್ದರೆ ಸ್ವಲ್ಪ ಅಸ್ಸೆಸ್ಟ್ ಪ್ರೈಸ್ ಕೊಟ್ಟರಾಯಿತು, ಇದಕ್ಕೆ ಕಾನೂನಿಲ್ಲ. ನ್ಯಾಯ ನೀತಿ ಏನೂ ಇಲ್ಲ, ಕಾಫಿ ಬೆಳೆದು ಹತ್ತು ಎಕರೆಗೆ 150 ರೂ. ದಂಡ ಕೊಟ್ಟರೆ ಏನಾದ ಹಾಗಾಯಿತು? ಈ ದಿವಸ ಕಾಫಿ ಬೆಳೆಯುವ ಪ್ರದೇಶದಲ್ಲಿ ಜಮೀನಿನ ಬೆಲೆ ಹೆಚ್ಚಾಗಿರುವಾಗ 150 ರೂಪಾಯಿ ತೆಗೆದುಕೊಂಡು ಬಿಟ್ಟು ಬಿಡುವುದು ಸರಿಯಲ್ಲ. ಇಂಥ ಸಂದರ್ಭಗಳಲ್ಲಿ ತಕರಾರು ತಃಖ್ತೆ ಹಾಕಿ ಯಾವ ರೀತಿ ಹಣ ವಸೂಲು ಮಾಡಬೇಕೆಂದು ನಿಗದಿಯಾದ ಒಂದು ಕಾನೂನನ್ನು ರಚಿಸಿ ಈ ಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆದು ಜಾರಿಗೆ ತರಬೇಕು. ಇಲ್ಲದೇ ಹೋದರೆ ಸರ್ಕಾರಕ್ಕೆ ಬರುವ ಹಣವೆಲ್ಲಾ ಪೋಲಾಗುತ್ತದೆಂಬ ವಿಚಾರವನ್ನು ತಮ್ಮ ಅವಗಾಹನೆಗೆ ತಂದಿದ್ದೇನೆ. ಹೀಗೆ ಅನ್ಯಾಯಕ್ಕೆ ಅವಕಾಶಕೊಟ್ಟರೆ ಬಡವರಿಗೆ ಒಂದು ಕುಂಟೆ ಜಮೀನೂ ಸಿಕ್ಕುವುದಿಲ್ಲ. ಒಂದು ಸನ್ನಿವೇಶದಲ್ಲಿ ಗೋಮಾಳದಲ್ಲಿ ಕಾಫಿ ಬೆಳೆದರು. ಅಲ್ಲಿ ಬೆಳೆಯಕೂಡದು. ಆಗ ಗೋಮಾಳ ಬಿಡಿಸಿಕೊಳ್ಳುವುದಕ್ಕಾಗದಿದ್ದರೆ 10-15 ಅನಧಿಕೃತವಾಗಿ ವ್ಯವಸಾಯ ಮಾಡುವ ಕಡೆ ಎರಡು

(ಶ್ರೀ ಬಿ. ಎನ್. ಬೋರಣ್ಣಗೌಡ)

ಎಕರೆಯಾದರೂ ಬಿಡಿಸಿಕೊಡಬೇಕೆಂದು ಅನೇಕರು ಕೇಳಿದ್ದಾರೆ. ಈಗ ಸರ್ಕಾರದ ಅನುಮತಿಯಿಲ್ಲದೆ ಕಾಫಿ ಬೆಳೆಯುವುದು ಮತ್ತು ಏಲಕ್ಕಿ ಬೆಳೆಯುವುದು ಬಹಳ ಹೆಚ್ಚಾಗಿದೆ. ಇದನ್ನು ತಪ್ಪಿಸಿ ಸರ್ಕಾರಕ್ಕೆ ಬರಬೇಕಾದ ಹಣವನ್ನು ಬರಮಾಡಿಕೊಳ್ಳಬೇಕು.

ಶ್ರೀ ಕಡಿದಾಳ್ ಮಂಜಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಸ್ವಾಮಿ, ಅಧ್ಯಕ್ಷರೆ, ಶ್ರೀ ಮಾನ್ ಬೋರಣ್ಣಗಾಡರು ಹೇಳಿದ್ದರಲ್ಲಿ ಸ್ವಲ್ಪ ಮಟ್ಟಿಗೆ ನತ್ಯ ಇದೆ. ಇತ್ತೀಚೆಗೆ ಅಕ್ರಮವಾಗಿ ಜಮೀನನ್ನು ಅಕ್ರಮಿಸಿಕೊಂಡು ಸಾಗುವಳಿ ಮಾಡಿದರೆ, ತಮಗೆ ಆ ಜಮೀನು ಸಿಕ್ಕುತ್ತದೆ ಎನ್ನುವ ಭಾವನೆ ಅಲ್ಲಲ್ಲಿ ಹಳ್ಳಿಗಾಡಿನ ಜನರಲ್ಲಿ ಮೂಡಿದೆ. ಅದರ ಪರಿಣಾಮವಾಗಿ ಅಕ್ರಮವಾಗಿ ಜಮೀನನ್ನು ಸಾಗುವಳಿ ಮಾಡುತ್ತಾ ಇರುವುದು ಜಾಸ್ತಿಯಾಗುತ್ತಿದೆ. ಅಕ್ರಮವಾಗಿ ಸಾಗುವಳಿ ಮಾಡುವುದನ್ನು ತಡೆಯುವುದಕ್ಕೋಸ್ಕರ ಸರ್ಕಾರದವರು ಇತ್ತೀಚೆಗೆ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಜಮೀನು ಮಾಲೀಕ ತನ್ನ ಜಮೀನಿನ ಹದ್ದುಬಸ್ತನ್ನು ಳೆದುಕೊಳ್ಳದೆ ಅಲ್ಪಸ್ವಲ್ಪ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದರೆ, ಅಂಥವರ ವಿಚಾರದಲ್ಲಿ ಅಧಿಕಾರಿಗಳು ಸ್ವಲ್ಪ ರಿಯಾಯಿತಿಯನ್ನು ತೋರಿಸುವುದು ಎಂದು ಹೇಳಿ ಒಂದು ಸೂಚನೆಯನ್ನು ಕೊಡಲಾಗಿದೆ. ಇತರ ಸಂದರ್ಭಗಳಲ್ಲಿ, ಎಂದರೆ, ಉದ್ದೇಶ ಪೂರ್ವಕವಾಗಿ ಅಕ್ರಮವಾಗಿ ಲಾಭ ಸಂಪಾದನೆಯ ದೃಷ್ಟಿಯಿಂದ, ಅಕ್ರಮವಾಗಿ ಜಾಸ್ತಿ ಸಂಪಾದಿಸುವ ದೃಷ್ಟಿಯಿಂದ, ಒತ್ತುವರಿ ಮಾಡಿಕೊಂಡಿದ್ದರೆ, ಅಂಥವರ ವಿಷಯದಲ್ಲಿ ಯಾವ ಸಹಾನುಭೂತಿಯೂ ಇರಬಾರದು, ಅಂಥವರನ್ನು ಕಾನೂನು ಪ್ರಕಾರ ಜಮೀನಿನಿಂದ ಉಚ್ಚಾಟನೆ ಮಾಡತಕ್ಕದ್ದು ಎಂದು ಸರ್ಕಾರ್ಯಲರನ್ನು ಕೆಲವು ತಿಂಗಳ ಹಿಂದೆ ಕೊಡಲಾಗಿದೆ.

ಕಾಫಿಯ ವಿಚಾರದಲ್ಲಿ ಜಮೀನು ಇದ್ದವರಿಗೆ ಜಮೀನು ಕೊಡುತ್ತೇವೆಂದು ಹೇಳಿದರು. ಜಮೀನು ಇಲ್ಲದಿರುವವರು ಕೇಳಿದರು ಕೂಡ, ಅವರಿಗೆ ಪ್ರಿಫರೆನ್ಸ್ ಕೊಡಬೇಕೆಂದು ಸೂಚನೆಯನ್ನು ಕೊಡಲಾಗಿದೆ. ಆದರೆ ಅನೇಕ ಸಂದರ್ಭಗಳಲ್ಲಿ ಜಮೀನು ಇಲ್ಲದಿರುವವರು ಕಾಫಿ ಜಮೀನನ್ನು ಕೇಳುವುದಕ್ಕೆ ಬರುವುದಿಲ್ಲ. ಕಾಫಿ ಸಾಗುವಳಿ ಮಾಡುವುದು ಕಷ್ಟಕರವಾದ ಕೆಲಸ. ಒಂದು ಎಕರೆ ಜಮೀನನ್ನು ಸಾಗುವಳಿಗೆ ತರಬೇಕಾದರೆ ಸುಮಾರು ಎರಡು ಸಾವಿರ ಅಥವಾ ಮೂರು ಸಾವಿರ ರೂಪಾಯಿಗಳ ಬಂಡವಾಳ ರೂಪವಾಗಿ ಖರ್ಚುಮಾಡಬೇಕಾಗುತ್ತದೆ. ಆದುದರಿಂದ ಬಡವರು ಸಾಮಾನ್ಯವಾಗಿ ಕಾಫಿ ಜಮೀನನ್ನು ಸಾಗುವಳಿಗೆ ಕೇಳುವುದಕ್ಕೆ ಬರುವುದಿಲ್ಲ.

ಶ್ರೀ ಬಿ. ರಾಚಯ್ಯ.—ಕೊಡಿಸಿ.

ಶ್ರೀ ಕಡಿದಾಳ್ ಮಂಜಪ್ಪ.—ಕೊಡುವುದಕ್ಕೆ ತಯಾರಿದ್ದೇನೆ. ಸಾಗುವಳಿಮಾಡಿ. 25 ಎಕರೆಯನ್ನು ಕೊಡಿಸುತ್ತೇನೆ. ಕಾಫಿ ಸಾಗುವಳಿ ಷ್ಟು ಸುಲಭವಲ್ಲ.

ಅಧ್ಯಕ್ಷರು.—ಯಾರಿಗೆ ಕೊಟ್ಟರೂ, ಅನೆಂಬ್ಲಿ ಮತ್ತು ಕೌನ್ಸಿಲ್ ಮೆಂಬರುಗಳಿಗೆ ಕೊಡಬೇಡಿ. ಕಷ್ಟಕ್ಕೆ ಬರುತ್ತದೆ (ನಗು)

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲರಿಗೂ ಕೊಡುವುದನ್ನು ಅವರಿಗೂ ಕೊಡಬೇಕು ಶ್ರೀ ಮಾನ್ ಬೋರಣ್ಣಗೌಡರು ಹೇಳಿದ ಹಾಗೆ ಅಕ್ರಮವಾಗಿ ಸರ್ಕಾರಿ ಜಮೀನನ್ನು ಅಕ್ರಮಿಸಿಕೊಂಡು ಕಾಫಿ ಮತ್ತು ಏಲಕ್ಕಿಯನ್ನು ಬೆಳೆಯುವ ತರಮೂದಿನಲ್ಲಿ ಕೆಲವರು ಇದ್ದರೂ ಇರಬಹುದು. ಅವರ ತಾಲ್ಲೂಕಿನಲ್ಲಿ ಅಥವಾ ಪಕ್ಕದ ತಾಲ್ಲೂಕಿನಲ್ಲಿ ಇರುವ ಪರಿಸ್ಥಿತಿ ಅವರಿಗೆ ಹೆಚ್ಚಾಗಿ ಗೊತ್ತಿದೆ ಎಂಬುದು ನನಗೆ ಗೊತ್ತಿದೆ. ಅದು ಕಾಡು ಪ್ರದೇಶ: ಅಲ್ಲಿಗೆ ರೆವಿನ್ಯೂ ಅಧಿಕಾರಿಗಳು ಹೋಗುವುದು ಕಷ್ಟ. ಅಂಥ ಸ್ಥಳಗಳಲ್ಲಿ ಅಕ್ರಮವಾಗಿ ಸಾಗುವಳಿ ನಡೆಯುತಾ ಇದೆ, ನಡೆದಿದೆ ಎಂದು ಗೊತ್ತಿದೆ. ಎಲ್ಲೆಲ್ಲಿ ಜಮೀನನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೋ, ಅಲ್ಲಿ highest penalty ವಿಧಾಯಕ ಮಾಡಬೇಕೆಂದು ಇವೊತ್ತು ಒಂದು ಸೂಚನೆಯನ್ನು ಕಳುಹಿಸಿಕೊಡುತ್ತೇವೆ. ಸರ್ಕಾರದ ಉದ್ದೇಶ ಮತ್ತು ಶ್ರೀಮಾನ್ ಬೋರಣ್ಣಗೌಡರ ಉದ್ದೇಶ ಒಂದೇ ಆಗಿದೆ. ಅಮೇರೆಲೆ ಬಡವರಿಗೆ ಈಗ ತಾನೇ ಹೊಸದಾಗಿ ಜಮೀನನ್ನು ಹಂಚುವ ಬಗ್ಗೆ ನಂಸ್ಥಾನದಆದ್ಯಂತ ಅನ್ವಯಿಸುವಂಥ ಏಕರೂಪವಾದ ನಿಬಂಧನೆಗಳನ್ನು ರಚಿಸಬೇಕೆಂದು ಮಾಡಿದ್ದೇವೆ. ಆ ಕರಡು ನಿಬಂಧನೆಗಳಲ್ಲಿ ಕಾಫಿ ಮತ್ತು ಏಲಕ್ಕಿ ಜಮೀನಿಗೆ ದರಕಾನ್ನು ಬಂದಾಗ ಬಡವರಿಗೆ ಮತ್ತು ನಿಮ್ನ ವರ್ಗದವರಿಗೆ ಪ್ರಿಫರೆನ್ಸ್ ಕೊಡಬೇಕೆಂದು ವಿಧಾಯಕ ಮಾಡುವುದರಲ್ಲಿ ಇದ್ದೇವೆ. ಸರ್ಕಾರ ಉದ್ದೇಶ ಬಡವರಿಗೆ ಅದು ಹೋಗಬೇಕು ಎಂದಿದ್ದರೂ, ಶ್ರೀಮಂತರಿಗೆ ಬಹಳ ಬುದ್ಧಿ ಇದೆ. ಇನ್‌ಫ್ಲೂಯೆನ್ ಇದೆ, ಕೆಲವು ಸಾರಿ ಅವರು ತೆಗೆದು ಕೊಳ್ಳುತ್ತಾರೆ.

ಇನ್ನೊಂದು ವಿಚಾರವನ್ನು ಮಾನ್ಯ ಸಭೆಯ ಗಮನಕ್ಕೆ ತರಬೇಕು. ಇದನ್ನು ಸರ್ವೆಮಾಡಿಸ ಬೇಕೆಂದು ಶ್ರೀ ಬೋರಣ್ಣಗೌಡರು ಹೇಳಿದ್ದಾರೆ. ಸರ್ವೇಯರ ಅಭಾವ ಬಹಳವಿದೆ. ಒಂದು ಕಡೆ ಕಾಡುಗಳ ಸರ್ವೆ ಆಪರೇಷನ್ ನಡೆಯುತ್ತಾಇದೆ; ಇನ್ನೊಂದು ಕಡೆ ರೀ-ಸೆಟಲ್ ಮೆಂಟ್ ಕೆಲಸ ನಡೆಯುತ್ತಾ ಇದೆ. ಇನ್ನೂ ಬೇರೆ ಬೇರೆ ಕಡೆ ಫೋಡು—ರಿಕಾರ್ಡುಗಳ ವಿಲೇವಾರಿಯ ಬಗ್ಗೆ ಕೆಲಸ ನಡೆಯುತ್ತ ಇದೆ. ಸರ್ವೇಯರುಗಳು ಸಾಕಷ್ಟು ಸಂಖ್ಯೆಯಲ್ಲಿಲ್ಲ. ಎಲ್ಲಾ ಕೆಲಸವನ್ನು ಒಂದೇ ಸಾರಿ ತೆಗೆದುಕೊಂಡು, ಮಾಡುವುದಕ್ಕೆ ಆಗುವುದಿಲ್ಲ. ಕೆಲವು ಬಾಬುಗಳಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸಬೇಕಾಗುತ್ತದೆ. ಇನಾಂ ಗ್ರಾಮಗಳ ಸರ್ವೆ ಮಾಡಿಸಬೇಕಾದುದು ಮುಖ್ಯವಾದುದು, ಬಹಳ ಹಿಂದಿನಿಂದ ಫೋಡಿ ರಿಕಾರ್ಡುಗಳ ವಿಲೇವಾರಿಯಾಗದೆ ನಿಂತಿದೆ. ಸರ್ವೆಮಾಡಿ, ಅವುಗಳನ್ನು ಬೇಗ ವಿಲೇವಾರಿಮಾಡಲು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇವುಗಳ ಜೊತೆಯಲ್ಲಿ ರೀ-ಸೆಟಲ್—ಮೆಂಟ್ ಕೆಲಸವನ್ನು ಜಾಗ್ರತೆ ಮುಗಿಸಬೇಕು. ಸರ್ವೆಮಾಡುವುದು ಅಷ್ಟು ಸುಲಭವಾದ ಕೆಲಸವಲ್ಲ.

6-00 P.M.

ಡಾ॥ ಆರ್. ನಾಗನಗೌಡ.—ಹೆಚ್ಚು ಮಂದಿಗೆ ಸರ್ವೆ ಟ್ರೇನಿಂಗ್ ಕೊಟ್ಟರೆ, unemployment problem ಬಹಳ ಮಟ್ಟಿಗೆ solve ಆಗುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರು ಕೊಟ್ಟಸಲಹೆಗೆ ಸರ್ಕಾರ ಹೆಚ್ಚು ಗಮನಕೊಡುತ್ತಿದೆ. ಅದನ್ನು ಕೂಡ ಮಾಡುತ್ತಾ ಇದ್ದೇವೆ. ಸರ್ವೆಯಲ್ಲಿ ಇನ್ನೊಂದು ಬ್ಯಾಚ್ ಟ್ರೇನಿಂಗ್ ಮಾಡುವ ಬಗ್ಗೆ ಸರ್ಕಾರದವರು ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಯೋಚನೆಮಾಡುತ್ತಾ ಇದ್ದಾರೆ.

ಶ್ರೀ ಬಿ. ಜಗಜೀವನದಾಸ್ ಶೆಟ್ಟಿ.—ಸರ್ವೆಗೊತ್ತಿದ್ದ ಶ್ಯಾನುಭೋಗರನ್ನು ಕರೆದುಕೊಂಡು ಬಂದು ಸರ್ವೆಮಾಡಿಸಬೇಕು. ಎರಡು ಮೂರು ಗ್ರಾಮಗಳನ್ನು ಒಬ್ಬನ ಚಾರ್ಜಿನಲ್ಲಿ ಇಡುವುದಕ್ಕಿಂತ ಹೆಚ್ಚಿನವರಿಂದ ಸರ್ವೆಮಾಡಿಸಬೇಕು.

ಅಧ್ಯಕ್ಷರು.—ಶ್ರೀ ನಾಗನಗೌಡರು ಒಂದು ಅಕ್ರಮ ಮಾಡಿದರು. ನೀವೂ ಒಂದು ಅಕ್ರಮ ಮಾಡಿದಿರಿ. ಡಿಸ್‌ಕಷನ್ನಿನಲ್ಲಿ ಹೆಸರು ಕಳುಹಿಸಿದೆ ಮಾತನಾಡುವುದಕೆ ಬರುವುದಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ಭಾಗಗಳಲ್ಲಿಯೂ ಶ್ಯಾನುಭೋಗರುಗಳಿಗೆ ಸರ್ವೆತರಪೇತು ಕೊಟ್ಟಿಲ್ಲ. ಹಳೆಯ ಮೈಸೂರಿನಶ್ಯಾನುಭೋಗರುಗಳಿಗೆ ಸರ್ವೆ ಟ್ರೇನಿಂಗ್ ಆಗಿಲ್ಲ. ಆದುದರಿಂದ ಅವರಿಂದ ಸರ್ವೆಮಾಡಿಸುವುದು ಸಾಧ್ಯವಿಲ್ಲ. ಬಹುಶಃ ದಕ್ಷಿಣ ಕನ್ನಡ ಜಿಲ್ಲೆಯ ಶಾನುಭೋಗರುಗಳಿಗೆ ಟ್ರೇನಿಂಗ್ ಆಗಿರಬಹುದು. ಅಷ್ಟೊಂದು ಹೆಚ್ಚು ಸಂಖ್ಯೆಯಲ್ಲಿ ಶ್ಯಾನುಭೋಗರು ಇದ್ದಾರೆಂದು ಭಾವಿಸಿಲ್ಲ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರೆ, ಅವರ ಕೆಲಸವನ್ನು ಉಪಯೋಗಿಸಿಕೊಳ್ಳುವುದಕ್ಕೆ ಸರ್ಕಾರದವರು ಸದಾಸಿದ್ಧವಾಗಿದ್ದಾರೆ.

ಇಷ್ಟು ಜೋಳಿ ಶ್ರೀ ಬೋರಣ್ಣಗಾಡರಿಗೆ ಪುನಃ ಏನು ಧರವಸೆ ಕೊಡುತ್ತೀನೆಂದರೆ; ಅಕ್ರಮವಾದ ಸಾಗುವಳಿಯನ್ನು ತಡೆಯುವುದಕ್ಕೆ ಸರ್ಕಾರದವರು ತೀವ್ರವಾದ ಕಾರ್ಯ ಕ್ರಮವನ್ನು ತೆಗೆದುಕೊಳ್ಳುತ್ತಾರೆ ಮತ್ತು ಕಾನೂನು ಪ್ರಕಾರ (highest penalty) ಎಷ್ಟು ದಂಡವನ್ನು ವಿಧಿಸುವುದಕ್ಕೆ ಸಾಧ್ಯವೋ ಅಷ್ಟನ್ನು ವಿಧಿಸಬೇಕೆಂದು ಸೂಚನೆಯನ್ನು ಕೊಡುತ್ತೇವೆ.

Mr. SPEAKER.—The House now rises and will meet tomorrow at 1 P.M.

The House adjourned at Eighteen Minutes past Six of the Clock to meet again at One of the Clock on Thursday, the 17th March 1960.